# ಮೋಕ್ಷಧಾಮದಲ್ಲೊಂದು ಸೇವಾಯಜ್ಞ

**ವಿರಾಜ್ ಮಂಗಲಗಿ**

ರಾಮಕೃಷ್ಣ ಮಿಷನ್ನಿನ ಅತ್ಯಂತ ಹಳೆಯ ಸಂಸ್ಥೆಗಳಲ್ಲಿ ಒಂದಾದ ವಾರಾಣಸಿ ಸೇವಾಶ್ರಮವು ಅನೇಕ ಕಾರಣಗಳಿಂದ ಮಹತ್ವದ ಸೇವಾಕೇಂದ್ರವಾಗಿದೆ. ಈ ಕುರಿತು ಬರೆದಿರುವ ಲೇಖಕರು ಗುಲ್ಬರ್ಗಾ ನಿವಾಸಿಗಳು. ರಾಮಕೃಷ್ಣ ಆಶ್ರಮದ ಭಕ್ತರೂ ಆಗಿರುವ ಅವರು ಹಲವಾರು ಬಗೆಯ ಸೇವಾಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.




೧೯೦೦ರ ಜೂನ್ ೧೨ನೆಯ ತಾರೀಖು; ಅಪರಾಹ್ನ ೩ ಘಂಟೆಯ ಸಮಯ. ಪ್ರಖರವಾದ ಬಿಸಿಲು ಭೂಮಿಯನ್ನು ಸುಡುತ್ತಿತ್ತು. ಚಾರುಚಂದ್ರದಾಸನು ಇದರ ಪರಿವೆಯೇ ಇಲ್ಲದೆ ಕಾಶಿಯ ರಸ್ತೆಯಲ್ಲಿ ಓಡಾಡುತ್ತಿದ್ದನು. ಪ್ರತಿಭಾನ್ವಿತ ವಿದ್ಯಾ ವಿನಯಸಂಪನ್ನನಾದ ಯುವಕ ಕಲ್ಕತ್ತದ ಒಂದು ಪ್ರಸಿದ್ಧ ಕಾರ್ಯಾಲಯದಲ್ಲಿ ಕೈತುಂಬ ಸಂಬಳ ಪಡೆಯುತ್ತಿದ್ದರೂ, ಆಧ್ಯಾತ್ಮಿಕ ಜೀವನವನ್ನರಸಿ ಕಾಶಿಗೆ ಬಂದಿದ್ದನು. ತಾರುಣ್ಯದಲ್ಲೇ ವೈರಾಗ್ಯದ ಜ್ವಾಲೆ ಅವನ ಎಲ್ಲ ಲೌಕಿಕ ಆಸೆ-ಆಕಾಂಕ್ಷೆಗಳನ್ನು ಸುಟ್ಟುಭಸ್ಮ ಮಾಡಿತ್ತು. ಇದೇ ಸಮಯದಲ್ಲಿ ಅವನಿಗೆ 'ಉದ್ಬೋಧನ' ಎಂಬ ಬಂಗಾಳಿ ಭಾಷೆಯ ಮಾಸಪತ್ರಿಕೆಯಲ್ಲಿ ಪ್ರಕಟವಾದ ಸ್ವಾಮಿ ವಿವೇಕಾನಂದರ 'ಗೆಳೆಯನೊಬ್ಬನಿಗೆ' ಎಂಬ ಕವನವು ದೊರೆಯಿತು. ಆ ಕವನದ ಒಂದೊಂದು ಸಾಲುಗಳೂ ಚಾರುಚಂದ್ರನ ಹೃದಯಾಂತರಾಳವನ್ನು ಪ್ರವೇಶಿಸಿ, ಅವನ ಜೀವನದಲ್ಲಿ ಒಂದು ಉತ್ಕ್ರಾಂತಿಯನ್ನೇ ಉಂಟುಮಾಡಿತು. ಸ್ವಾಮೀಜಿಯವರ ಧರ್ಮದ ವಿನೂತನ ವ್ಯಾಖ್ಯಾನವನ್ನು ಕಂಡುಕೊಂಡು ಚಾರುಚಂದ್ರನು ಮೂಕವಿಸ್ಮಿತನಾದನು.

''ಮಂತ್ರ, ತಂತ್ರ, ಪ್ರಾಣಾಯಾಮ, ಭಿನ್ನ ಭಿನ್ನ ಮತಗಳು, ವಿಜ್ಞಾನ, ತ್ಯಾಗ, ಇವುಗಳಲ್ಲಿ ಬುದ್ಧಿಯ ಭ್ರಮೆ. ಪ್ರೇಮ, ಪ್ರೇಮವೊಂದೇ ಏಕಮಾತ್ರ ಧನ..., ಬ್ರಹ್ಮನಿಂದ ಹಿಡಿದು ಕೀಟಪರಮಾಣುವಿನವರೆಗೆ ಎಲ್ಲ ಭೂತಗಳಲ್ಲಿಯೂ ಪ್ರೇಮಮಯನಾಗಿರುವ ಆ ಭಗವಂತನೇ ಇರುವನು. ನಿನ್ನ ಮನ, ಪ್ರಾಣ, ಶರೀರಗಳನ್ನು ಅವುಗಳ ಅಡಿಯಲ್ಲಿ ಅರ್ಪಿಸು. ನಿನ್ನ ಮುಂದಿರುವ ಅನಂತ ರೂಪಗಳಿವು. ಇವುಗಳನ್ನು ಬಿಟ್ಟು ನೀನೆಲ್ಲಿ ಭಗವಂತನನ್ನು ಅರಸುವೆ? ಯಾರು ಜೀವಿಗಳನ್ನು ಪ್ರೀತಿಸುವರೋ ಅವರು ಭಗವಂತನನ್ನೇ ಸೇವಿಸುವರು.''


ಸ್ವಾಮೀಜಿಯವರ ಈ ಮಾತುಗಳು ಚಾರುಚಂದ್ರನ ಮುಂದೆ ಒಂದು ಹೊಸ ಪ್ರಪಂಚವನ್ನೇ ತೆರೆದವು. ಆ ಕವನವನ್ನು ಮತ್ತೆ ಮತ್ತೆ ಮನನ ಮಾಡುತ್ತ ಭಾವೋನ್ಮತ್ತನಾದನು. ಅಲ್ಲೇ ಸನಿಹದಲ್ಲಿದ್ದ ಸ್ನೇಹಿತ ಯಾಮಿನೀರಂಜನ್ ಮಜುಮ್ದಾರನಿಗೂ ಓದಿ ತಿಳಿಸುತ್ತ, ಅದರಲ್ಲಿದ್ದ ಆಧ್ಯಾತ್ಮಿಕ ರಸಾಮೃತವನ್ನು ಪಾನ ಮಾಡಿಸಿದನು. ಚಾರುಚಂದ್ರನ ಪ್ರಖರವಾದ ವೈರಾಗ್ಯ ಮತ್ತು ಸೇವಾ ಮನೋಭಾವನೆ ಅವನ ಸ್ನೇಹಿತನ ಮೇಲೂ ಗಾಢವಾದ ಪ್ರಭಾವವನ್ನುಂಟು ಮಾಡಿ ಅವನನ್ನೂ ಸ್ಪಂದಿಸುವಂತೆ ಮಾಡಿತು. ಸ್ವಾಮೀಜಿಯವರು ಬೋಧಿಸಿದ 'ಜೀವರಲ್ಲಿ ಶಿವನನ್ನು ಕಾಣು'ವ ನೂತನ ತತ್ತ್ವವನ್ನು ಚಿಂತನ-ಮಂಥನ ಮಾಡುತ್ತ ಸ್ನೇಹಿತರಿಬ್ಬರೂ ಆನಂದದಲ್ಲಿ ರಾತ್ರಿಯನ್ನು ಕಳೆದರು.

ಮರುದಿನ ಜೂನ್ ೧೩ರಂದು ಎಂದಿನಂತೆ ಯಾಮಿನೀರಂಜನ್ ಪವಿತ್ರ ಗಂಗಾಸ್ನಾನವನ್ನು ಮುಗಿಸಿ ವಿಶ್ವನಾಥ-ಅನ್ನಪೂರ್ಣೆಯ ದರ್ಶನಕ್ಕೆಂದು ಹೋಗುತ್ತಿದ್ದಾಗ, ರಸ್ತೆಯ ಬದಿಯಲ್ಲಿ ವೃದ್ಧ ಯಾತ್ರಿಕ ಮಹಿಳೆಯೊಬ್ಬಳು ಕೊಳಕು ವಸ್ತ್ರಗಳನ್ನು

ಧರಿಸಿ ಮೈಯೆಲ್ಲ ಗಲೀಜು ಮಾಡಿಕೊಂಡು ಆಯಾಸದಿಂದ ನರಳುತ್ತ ಹಾಗೆಯೇ ಬಿದ್ದಿದ್ದಳು. ಈ ದೃಶ್ಯವನ್ನು ಕಂಡು ಯಾಮಿನೀ ರಂಜನ್ ತೀವ್ರ ಆತಂಕದಿಂದ ದಿಗ್ಭ್ರಮೆಗೊಂಡನು. ಅವನು ಸ್ವಲ್ಪವೂ ತಡಮಾಡದೆ ತನ್ನ ಬಟ್ಟೆಯಿಂದ ಅವಳ ಶರೀರವನ್ನು ಶುಭ್ರಗೊಳಿಸಿ, ಎಚ್ಚರಿಕೆಯಿಂದ ಅವಳನ್ನು ಮೇಲಕ್ಕೆತ್ತಿಕೊಂಡು ಒಂದು ಕಟ್ಟೆಯ ಮೇಲೆ ಮಲಗಿಸಿದನು. ಪಕ್ಕದಲ್ಲಿದ್ದ ಜನರಿಂದ ನಾಲ್ಕಾಣೆಯನ್ನು ಸಂಗ್ರಹಣೆ ಮಾಡಿ ಎರಡು ತುಂಡು ಬ್ರೆಡ್ ಮತ್ತು ಮಣ್ಣಿನ ಲೋಟದಲ್ಲಿ ಸ್ವಲ್ಪ ಬಿಸಿ ಹಾಲನ್ನು ತಂದು ಕುಡಿಸಿ ಅವಳಿಗೆ ಆರೈಕೆ ಮಾಡಿದನು. ಭಿಕ್ಷೆಯಿಂದ ತಂದ ಆಹಾರದಿಂದ ಅವಳಿಗೆ ಊಟವನ್ನು ಮಾಡಿಸಿದ. ಆಹಾರ ಮತ್ತು ಪೋಷಣೆಯಿಂದ ಅವಳು ಬೇಗನೆ ಚೇತರಿಸಿಕೊಂಡಳು. ಚಾರುಚಂದ್ರದಾಸ್, ಯಾಮಿನೀರಂಜನ್ ಮಜುಮ್ದಾರ್, ಕೇದಾರನಾಥ ಮೌಲಿಕ ಮತ್ತು ಇತರ ಸ್ನೇಹಿತರು ಆಕೆಯನ್ನು ಆಸ್ಪತ್ರೆಗೆ ಸಾಗಿಸಿ, ಭಿಕ್ಷೆಯ ಮೂಲಕ ಆಕೆಯ ಚಿಕಿತ್ಸೆಗೆ ಬೇಕಾಗುವ ಖರ್ಚನ್ನು ಒದಗಿಸಿದರು. ಮೃತ್ಯುವಿನ ಅಂಚಿನಲ್ಲಿದ್ದ ಅವಳ ಚೇತರಿಕೆ ಈ ತರುಣರಲ್ಲಿ ನವಸ್ಫೂರ್ತಿಯನ್ನುಂಟುಮಾಡಿತು.

ಸ್ವಾಮೀಜಿಯವರ ಚಿಂತನೆಗಳಿಂದ ಸ್ಫೂರ್ತಿರಂಜಿತರಾದ ಸ್ನೇಹಿತರೆಲ್ಲರೂ ಸೇರಿ ಮಾಡಿದ ಈ ಸಣ್ಣ ಸೇವಾಕಾರ್ಯವೇ ಇಂದಿಗೂ ವಾರಣಾಸಿಯ ಸೇವಾಶ್ರಮದಲ್ಲಿ ಮಾಡಲಾಗುತ್ತಿರುವ ಸೇವಾರೂಪದ ಮಹಾಯಜ್ಞಕ್ಕೆ ಬೀಜಾಂಕುರವಾಯಿತು. ಈ ವೃದ್ಧ ಮಹಿಳೆಯ ಹೆಸರು 'ನೃತ್ಯಕಾಳಿ' ಎಂದು; ಇವಳೇ ಸೇವಾಶ್ರಮದ ಸೇವೆಯನ್ನು ಸ್ವೀಕರಿಸಿದ ಮೊದಲ 'ನರರೂಪದ ನಾರಾಯಣಿ' ಎಂದೂ ಉಲ್ಲೇಖನ ಮಾಡಬಹುದು.

ಸೇವಾದೀಕ್ಷೆಯನ್ನು ಸ್ವೀಕರಿಸಿದ ಈ ಯುವಕರೆಲ್ಲರೂ ಕಾಶಿಯ ಗಲ್ಲಿಗಲ್ಲಿಗಳಲ್ಲಿ ಅಸಹಾಯಕರಾಗಿ ಯಾತನೆಪಡುತ್ತಿರುವ ಯಾತ್ರಾರ್ಥಿಗಳನ್ನು, ನಿರ್ಗತಿಕ ವಿಧವೆಯರನ್ನು ಪತ್ತೆಹಚ್ಚಿ ಅವರನ್ನು ಸಾಕ್ಷಾತ್ ಭಗವಂತನೆಂದು ಭಾವಿಸಿ ಸೇವೆ ಸಲ್ಲಿಸುತ್ತಿದ್ದರು. ಭಿಕ್ಷೆಯಿಂದ ಸಂಗ್ರಹವಾದ ಹಣದಿಂದಲೇ ಬಟ್ಟೆ, ಆಹಾರ, ವಸತಿ, ಔಷಧಗಳನ್ನು ಅವರಿಗೆ ಒದಗಿಸುತ್ತಿದ್ದರು. ಕೇದಾರನಾಥನ ಮನೆಯೇ ಈ ಸಂಘಟನೆಯ ಕಛೇರಿಯಾಯಿತು. ಪ್ರತಿನಿತ್ಯ ಸಾಯಂಕಾಲ ಸ್ನೇಹಿತರೆಲ್ಲರೂ ಚಾರುಚಂದ್ರನ ಮುಂದಾಳ್ತನದಲ್ಲಿ ಕ್ರಮಗತವಾಗಿ ಸ್ವಾಮೀಜಿಯವರ ಜ್ಞಾನಯೋಗ, ರಾಜಯೋಗ, ಕರ್ಮಯೋಗ ಮತ್ತು ಭಕ್ತಿಯೋಗ ಕೃತಿಗಳನ್ನು ಅಧ್ಯಯನ- ಮನನ ಮಾಡುತ್ತಿದ್ದರು. ಈ ಸಮಯದಲ್ಲಿಯೇ ಸ್ವಾಮಿ ನಿರಂಜನಾನಂದರ ಮಾರ್ಗದರ್ಶನದಲ್ಲಿ ಯುವಕರೆಲ್ಲರೂ ಶ್ರೀರಾಮಕೃಷ್ಣರು ಹಾಗೂ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಮೈಗೂಡಿಸಿಕೊಂಡು, 'ತ್ಯಾಗ ಮತ್ತು ಸೇವೆ'ಯೆಂಬ ಅತ್ಯುನ್ನತ ಧ್ಯೇಯಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಡಲು ಸಂಕಲ್ಪ ತೊಟ್ಟರು.



ಚಾರುಚಂದ್ರ ದಾಸ್
(ಸ್ವಾಮಿ ಶುಭಾನಂದ)

ಯುವಮಿತ್ರರ ಈ ನಿಸ್ವಾರ್ಥವಾದ ಸೇವೆ ಕಾಶಿಯ ಜನರನ್ನು ಆಕರ್ಷಿಸಿ ಅವರೆಲ್ಲರೂ ಇವರ ಸಹಾಯಕ್ಕೆ ಮುಂದೆ ಬಂದರು. ೧೩ ಸೆಪ್ಟೆಂಬರ್ ೧೯೦೦ರಂದು ನಗರದ ಒಂದು ಸಣ್ಣ ಬಾಡಿಗೆ ಮನೆಯಲ್ಲಿ 'ಬಡಜನರ ಪರಿಹಾರ ಸಂಸ್ಥೆ'ಯ(Poor Men's Relief Association, Benaras) ಸ್ಥಳೀಯ ಜನರ ಪೂರ್ಣ ಸಹಕಾರ ಮತ್ತು ಬೆಂಬಲದೊಂದಿಗೆ ಪ್ರಾರಂಭವಾಯಿತು. ೧೯೦೧ ಫೆಬ್ರವರಿಯಲ್ಲಿ ಈ ಸಂಸ್ಥೆಯು ರಾಮಪುರದಲ್ಲಿನ ಡಿ ೩೨, ೮೪ ಜಂಗಾಂಬರಿಯಲ್ಲಿ ತಿಂಗಳಿಗೆ ೫ ರೂಪಾಯಿಗಳ ಬಾಡಿಗೆಯ ಮೇಲೆ ಒಂದು ದೊಡ್ಡ ಮನೆಗೆ ಸ್ಥಳಾಂತರಗೊಂಡಿತು. ಸಂಸ್ಥೆಯ ಸಮಸ್ತ ಚಟುವಟಿಕೆಗಳನ್ನು ಈ ಕಟ್ಟಡದಲ್ಲಿಯೇ ನಡೆಸಲಾರಂಭಿಸಿದರು. ಹಣದ ಅಭಾವದಿಂದಾಗಿ ಕೆಲಸದವರನ್ನಿಟ್ಟುಕೊಳ್ಳಲು ಅಸಾಧ್ಯವಾದಾಗ, ಈ ಯುವಕರೇ ರೋಗಿಗಳಿಗೆ ಎಲ್ಲ ರೀತಿಯ ಸೇವೆಯನ್ನು ಸಲ್ಲಿಸಿ ಅಲ್ಲಿನ ಶೌಚಾಲಯಗಳನ್ನೂ ಸ್ವಚ್ಛಮಾಡುತ್ತಿದ್ದರು.

ಸ್ವಾಮೀಜಿ ಈ ಯುವಕರ ಸೇವಾಕಾರ್ಯಗಳಿಂದ ಸಂಪ್ರೀತರಾಗಿ, ಕಾಶಿಯಿಂದ ಯಾರೇ ಬಂದರೂ ಇವರ ಕೆಲಸಕಾರ್ಯಗಳ ಬಗ್ಗೆ ವಿಚಾರಿಸುತ್ತಿದ್ದರು. ಇದೇ ಸಮಯಕ್ಕೆ ಯಾಮಿನೀರಂಜನ್ ಸ್ವಾಮೀಜಿಯವರನ್ನು ನೋಡುವ ಉದ್ದೇಶದಿಂದ ಬೇಲೂರು ಮಠಕ್ಕೆ ಬಂದನು. ಸ್ವಾಮೀಜಿ ಅವನ ಉತ್ಸಾಹ, ಸೇವೆಯ ಕುರಿತಾದ ಆಳವಾದ ಶ್ರದ್ಧೆಯನ್ನು ಗುರುತಿಸಿ ಅವನಿಗೆ ಮಂತ್ರದೀಕ್ಷೆಯನ್ನು ಅನುಗ್ರಹಿಸಿದರು. ಅವನಿಂದ ಸಂಸ್ಥೆಯ ಸಮಗ್ರ ಚಟುವಟಿಕೆಗಳನ್ನು ಕೇಳಿ ತಿಳಿದುಕೊಂಡು, ''ಭಾರತದ ಪ್ರತಿಯೊಂದು ಯಾತ್ರಾಸ್ಥಳಗಳಲ್ಲಿ ಇಂತಹ ಆಶ್ರಮಗಳಿದ್ದರೆ ಬಹಳ ಒಳಿತಾಗುತ್ತದೆ'' ಎಂದು ಉದ್ಗರಿಸಿದರು. ಈ ಸಂಸ್ಥೆಗೆ ಭೇಟಿಕೊಟ್ಟು ಅಲ್ಲಿನ ಸಂಪೂರ್ಣ ಮಾಹಿತಿಯನ್ನು ತಮಗೆ ಒಪ್ಪಿಸುವಂತೆ ಸ್ವಾಮಿ ನಿರ್ಮಲಾನಂದರಿಗೆ ಹೇಳಿದರು. ''ಈ ನಮ್ಮ ಬಂಗಾಳಿ ಹುಡುಗರು ಏನೂ ಮಾಡುತ್ತಿಲ್ಲ. ಆದರೆ ವಾರಣಾಸಿಯ ತರುಣರು ನನ್ನ ಉತ್ಸಾಹಕ್ಕೆ ತಕ್ಕಂತೆ ಸ್ವಲ್ಪ ಪ್ರಮಾಣದಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ'' ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಸ್ವಾಮಿ ವಿವೇಕಾನಂದರು ೧೯೦೨ರ ಫೆಬ್ರವರಿಯಲ್ಲಿ ಕಾಶಿಗೆ ಆಗಮಿಸಿ ಈ ಯುವಕರಲ್ಲಿ ನವಚೇತನವನ್ನು ತುಂಬಿ ಪ್ರೋತ್ಸಾಹಿಸಿದರು. ಸ್ವಾಮೀಜಿಯವರು ವ್ಯಕ್ತಿತ್ವ ಹಾಗೂ ಅವರ ದಿವ್ಯ ಸಾನ್ನಿಧ್ಯವೇ ಈ ಯುವಕರ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು. ಸ್ವಾಮೀಜಿ ಯುವಕರನ್ನುದ್ದೇಶಿಸಿ: ''ಪರಿಹಾರ ನೀಡಲು ನೀವ್ಯಾರು? ಸೇವೆಯೊಂದೇ ನಿಮ್ಮಿಂದ ಸಾಧ್ಯ. ಅಹಂಕಾರವನ್ನು

ತ್ಯಜಿಸಿ ಎಲ್ಲ ಕಾಮನೆಗಳನ್ನು ದಹಿಸಿ, ಸತ್ಯ ಮತ್ತು ಪ್ರೀತಿಯ ಮಾರ್ಗವನ್ನು ಹಿಡಿದು ನರರೂಪಿಯಾದ ನಾರಾಯಣನ ಸೇವೆಯನ್ನು ಮಾಡಿ... ನಿಮ್ಮ ಕೇಂದ್ರಕ್ಕೆ 'ರಾಮಕೃಷ್ಣ ಮಿಷನ್ ಸೇವಾಶ್ರಮ' (Ramakrishna Mission Home of Service) ಎಂದು ಹೆಸರಿಡಿ'' ಎಂದು ಆದೇಶಿಸಿದರು.

ಈ ಯುವಕರಿಗೆ ಮತ್ತಷ್ಟು ಸಹಾಯ-ಪ್ರೋತ್ಸಾಹ ಸಿಗಲೆಂದು ಸ್ವಾಮೀಜಿ 'ರಾಮಕೃಷ್ಣ ಮಿಷನ್' ಪರವಾಗಿ ಸಾರ್ವಜನಿಕರಲ್ಲಿ ಒಂದು ಮನವಿ ಪತ್ರವನ್ನು ಪ್ರಕಟಿಸಿದರು. ರಾಮಕೃಷ್ಣ ಮಿಷನ್ನಿನ ಸೇವಾ ಕಾರ್ಯಗಳ ಇತಿಹಾಸದಲ್ಲೇ ಸ್ವಾಮೀಜಿಯವರ ಈ ಮನವಿ ಪತ್ರ ಒಂದು ವಿಶೇಷವಾದ ಸ್ಥಾನವನ್ನು ಪಡೆದುಕೊಂಡಿದೆ. ಹೆಚ್ಚು ಜನರು ಸಂಘಟಿತರಾಗಿ ಕೆಲಸ ಕಾರ್ಯಗಳನ್ನು ಮಾಡಲು ಮತ್ತು ಸೇವಾಶ್ರಮಕ್ಕೆ ಒಂದು ಸ್ಥಿರತೆಯನ್ನು ಒದಗಿಸಲು ೧೯೦೨ರ ನವೆಂಬರ್ ೨೩ರಂದು ಇದನ್ನು ರಾಮಕೃಷ್ಣ ಮಹಾಸಂಘವು ಅಧಿಕೃತವಾಗಿ ಸ್ವೀಕರಿಸಿತು.

ಸ್ವಾಮಿ ಬ್ರಹ್ಮಾನಂದರು ೧೯೦೩ರಲ್ಲಿ ಕಾಶಿಗೆ ಭೇಟಿ ನೀಡಿದಾಗ ಸೇವಾಶ್ರಮದ ಕಾರ್ಯಗಳು ಸುಗಮವಾಗಿ ನಡೆಯಲು ಒಂದು ಸುಸಜ್ಜಿತವಾದ ಆಸ್ಪತ್ರೆಯನ್ನು ಕಟ್ಟಲು ನಿರ್ಧರಿಸಿದರು.


ಸ್ವಾಮಿ ಬ್ರಹ್ಮಾನಂದರು

ಸ್ವಾಮಿ ಶಿವಾನಂದರ ಮೇಲ್ವಿಚಾರಣೆಯಲ್ಲಿ 'ಲಕ್ಸಾ' ಎಂಬ ಪ್ರದೇಶದಲ್ಲಿ ಒಂದು ವಿಶಾಲವಾದ ಸ್ಥಳವನ್ನು ೫೯೭೨ ರೂಪಾಯಿಗೆ ಕೊಂಡುಕೊಳ್ಳಲಾಯಿತು. ಸ್ವಾಮಿ ವಿಜ್ಞಾನಾನಂದರು ಕಟ್ಟಡದ ವಾಸ್ತುಶಿಲ್ಪ ಮತ್ತು ವಿನ್ಯಾಸವನ್ನು ಪೂರ್ಣಗೊಳಿಸಿ, ಅದಕ್ಕೆ ಬೇಕಾಗುವ ಹಣವನ್ನು ಅಂದಾಜು ಮಾಡಿದರು. ದೇಶ ವಿದೇಶಗಳಿಂದ ಅನೇಕ ದಾನಿಗಳು ಸೇವಾಶ್ರಮದ ಕಟ್ಟಡಕ್ಕಾಗಿ ಧನಸಹಾಯವನ್ನು ಮಾಡಿದರು. ಸೋದರಿ ನಿವೇದಿತಾ ಕೂಡ ಮನವಿ ಪತ್ರದ ಮೂಲಕ ಅನೇಕ ಕಡೆಗಳಲ್ಲಿ ಸಂಚರಿಸಿ ಹಣ ಸಂಗ್ರಹಣೆಗಾಗಿ ದಾನಿಗಳಲ್ಲಿ ನಿವೇದನೆ ಮಾಡಿದಳು. ೧೯೦೮ ರಲ್ಲಿ ಕಟ್ಟಡದ ಕೆಲಸವು ಪ್ರಾರಂಭವಾಗಿ, ೧೯೧೦ ಜುಲೈ ೭ರಂದು ೫೦ ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಸ್ವಾಮಿ ಬ್ರಹ್ಮಾನಂದರು ಭಗವದರ್ಪಣ ಮಾಡಿದರು.

ರಾಮಕೃಷ್ಣ ಸೇವಾಶ್ರಮವು ರೋಗಿ ನಾರಾಯಣರ ಸೇವೆಯ ಜೊತೆಗೆ ಹಂತಹಂತವಾಗಿ ವಿವಿಧ ಕಾರ್ಯಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿತು. ನಿರಾಶ್ರಿತ ವಿಧವೆಯರಿಗಾಗಿ ಉಳಿದುಕೊಳ್ಳುವ ವ್ಯವಸ್ಥೆಯ ಜೊತೆಗೆ ಪ್ರತಿತಿಂಗಳೂ ಅವರಿಗೆ ಧನ ಸಹಾಯ ನೀಡಲಾಗುತ್ತಿದ್ದು, ಬಡವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ಧನವನ್ನು ಕೊಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅಗತ್ಯವಾದ ಔಷಧೋಪಚಾರವನ್ನು ಒದಗಿಸುವ ಉದ್ದೇಶದಿಂದ ಸಂಚಾರಿ ಆಸ್ಪತ್ರೆ, ರೋಗಿಗಳಿಗೆ ಪೌಷ್ಟಿಕ ಆಹಾರ ನೀಡುವುದಕ್ಕಾಗಿ ಒಂದು ಸುಸಜ್ಜಿತವಾದ ಗೋಶಾಲೆ, ಸಾರ್ವಜನಿಕ ಗ್ರಂಥಾಲಯ, ದಿವ್ಯತ್ರಯರ ವೇದಾಂತ ಸಾಹಿತ್ಯ ಮಾರಾಟದ ಪುಸ್ತಕ ಭಂಡಾರ ಮತ್ತು ಪ್ರಕೃತಿ ವಿಕೋಪಗಳು ಬಂದೊದಗಿದಾಗ ವ್ಯವಸ್ಥಿತವಾದ ರೀತಿಯಲ್ಲಿ ಪರಿಹಾರ ಕಾರ್ಯವನ್ನೂ ಕೈಗೊಳ್ಳಲಾಗುತ್ತಿದೆ.

ಶ್ರೀಮಾತೆ ಶಾರದಾದೇವಿಯವರು ಸೇವಾಶ್ರಮಕ್ಕೆ ೧೯೧೨ ನವೆಂಬರ್ ೮ರಂದು ಭೇಟಿಕೊಟ್ಟು , ಅಲ್ಲಿಯ ಎಲ್ಲ ಸೇವಾ ಕಾರ್ಯಗಳನ್ನು ಕಂಡು ಸಂತಸವನ್ನು ವ್ಯಕ್ತಪಡಿಸಿದರು. ಆಸ್ಪತ್ರೆಯ ಸ್ವಚ್ಛತೆ ಮತ್ತು ರೋಗಿಗಳಿಗೆ ವ್ಯವಸ್ಥಿತವಾದ ರೀತಿಯಲ್ಲಿ ಶುಶ್ರೂಷೆ ಮಾಡುವುದನ್ನು ಗಮನಿಸಿ, ''ಶ್ರೀರಾಮಕೃಷ್ಣರು ಇಲ್ಲಿ ಪ್ರತ್ಯಕ್ಷ ವಾಸವಾಗಿದ್ದಾರೆ. ದೇವಿ ಲಕ್ಷ್ಮಿಯು ಇಲ್ಲಿ ನೆಲೆನಿಂತಿದ್ದಾಳೆ'' ಎಂದರು. ಇಂತಹ ಪರಮ ಪ್ರಶಾಂತವಾದ ಸುಂದರ ಸೇವಾಶ್ರಮಕ್ಕೆ ಕಾಣಿಕೆಯಾಗಿ ೧೦ ರೂಪಾಯಿಗಳನ್ನು ಕಳುಹಿಸಿಕೊಟ್ಟರು. ಅತ್ಯ ಮೂಲ್ಯವಾದ ಆ ೧೦ ರೂಪಾಯಿ ನೋಟನ್ನು ಬಹಳ ಎಚ್ಚರಿಕೆಯಿಂದ ರಕ್ಷಿಸಿಡಲಾಗಿದೆ. ಇಂದಿಗೂ ನಾವು ಅದನ್ನು ನೋಡಬಹುದು.

೧೯೧೯ರಲ್ಲಿ ಸ್ವಾಮಿ ತುರೀಯಾನಂದರು ಸೇವಾಶ್ರಮದಲ್ಲಿ ಕೆಲವು ತಿಂಗಳುಗಳು ಉಳಿದುಕೊಂಡರು. ಅವರ ತಪೋಮಯವಾದ ಜೀವನದಿಂದ ಅಲ್ಲಿ ದಿವ್ಯವಾದ ಆಧ್ಯಾತ್ಮಿಕ ವಾತಾವರಣ ನಿರ್ಮಾಣವಾಯಿತು. ಅಲ್ಲಿಯ ಯುವ ಸಂನ್ಯಾಸಿಗಳು ಸೇವೆಯ ಆದರ್ಶದೊಂದಿಗೆ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸುವಂತಾಗಬೇಕು ಎಂಬುದು ಅವರ ಮನೋಭಾವವಾಗಿತ್ತು. ಸೇವಾಶ್ರಮದ ಕಾರ್ಯವ್ಯಾಪ್ತಿಯನ್ನು ಶ್ಲಾಘಿಸುತ್ತ ಅಲ್ಲಿನ ಕೆಲವು ಲೋಪದೋಷಗಳನ್ನು ಅತ್ಯಂತ ಸಹನೆಯಿಂದ ತಿದ್ದುಪಡಿ ಮಾಡಿಸಿದರು. ಅವರು ದಿನನಿತ್ಯ ಸಾಯಂಕಾಲ ಭಗವದ್ಗೀತೆ, ಯೋಗವಾಸಿಷ್ಠ, ಉಪನಿಷತ್ತುಗಳು ಮತ್ತು ಸ್ವಾಮಿ ವಿವೇಕಾನಂದ ಕೃತಿಶ್ರೇಣಿ - ಗ್ರಂಥಗಳನ್ನು ಓದಿ ತಾವು ಪಡೆದ ದೀರ್ಘಕಾಲದ ಧ್ಯಾನಾನುಭವದಿಂದ ಸ್ಪಷ್ಟವಾದ ವಿವರಣೆಯನ್ನು ನೀಡುತ್ತಿದ್ದರು. ಅವರಿಗೆ ಶಾಸ್ತ್ರಗ್ರಂಥಗಳಲ್ಲಿದ್ದ ಆಳವಾದ ಜ್ಞಾನ ಮತ್ತು ನಿಖರತೆಯನ್ನು ಕಂಡುಕೊಂಡು ಕಾಶಿಯ 'ಸೆಂಟ್ರಲ್ ಹಿಂದೂ ಕಾಲೇಜಿನ' ಆಸಕ್ತ ಪ್ರಾಧ್ಯಾಪಕರು 'ಪಾತಂಜಲ ಯೋಗಸೂತ್ರಗಳ' ವ್ಯಾಖ್ಯಾನವನ್ನು ಆಲಿಸಲು ತಪ್ಪದೆ ಬರುತ್ತಿದ್ದರು. ಸ್ವಾಮಿ ತುರಿಯಾನಂದರ ಸಾನ್ನಿಧ್ಯದಿಂದ ಸೇವಾಶ್ರಮದ ಸೇವಾರ್ಥಿಗಳಿಗೆ ಬಹಳ ಉಪಯೋಗವಾಯಿತು.

ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರ ಸಂಪರ್ಕದಿಂದ ಸೇವಾಶ್ರಮದ ಸೇವಾರ್ಥಿಗಳು ಅತ್ಯುನ್ನತ ಮಟ್ಟದ ಆಧ್ಯಾತ್ಮಿಕ ಮನಃ

ಸ್ಥಿತಿಯನ್ನು ತಲುಪುವಂತಾಯಿತು. ಕೇದಾರನಾಥ ಮುಂದೆ ಸ್ವಾಮಿ ಅಚಲಾನಂದರಿಗೆ, 'ಇಂದು ಎಷ್ಟು ಜನ ನಾರಾಯಣರು ಸೇವಾಶ್ರಮಕ್ಕೆ ಬಂದಿದ್ದರು?' ಎಂದು ವಿಚಾರಿಸುತ್ತಿದ್ದರು. ರೋಗಿಗಳು ಎಂಬ ಪದವನ್ನು ಕೇಳುತ್ತಲೇ ಅವರು ಗಂಭೀರ ಭಾವವನ್ನು ತಾಳಿ, ''ನೀವು ಸರಿಯಾದ ಭಾವನೆಯನ್ನಿಟ್ಟು ಕೊಂಡು ಸೇವೆ ಮಾಡಬೇಕು – ಇದರಿಂದ ನಿಮ್ಮ ಆಧ್ಯಾತ್ಮಿಕ ಉನ್ನತಿಯುಂಟಾಗುತ್ತದೆ; ಮತ್ತು ನೀವು ಸೇವೆ ಮಾಡುವ ವ್ಯಕ್ತಿಗೂ ಸಹಾಯವಾಗುವುದು. ಸೇವೆ ಮಾಡುತ್ತಿರುವುದು ಸಾಕ್ಷಾತ್ ಭಗವಂತನನ್ನೇ, ನಾರಾಯಣನನ್ನೇ'' ಎಂದು ಕಿರಿಯ ಸಂನ್ಯಾಸಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು.

ಸೇವಾಶ್ರಮದ ಕುರಿತು ಎರಡನೆಯ ತಲೆಮಾರಿನ ಸಂನ್ಯಾಸಿಗಳ ಮನೋಭಾವನೆಯನ್ನು ಗಮನಿಸೋಣ.

ಸ್ವಾಮಿ ಮುಕ್ತಾನಂದರು ಮಹಾನ್ ಕರ್ಮಯೋಗಿಗಳು; ಇವರು ರಾಮಕೃಷ್ಣ ಮಹಾಸಂಘದಲ್ಲಿ 'ಬಾನ್ ಬಾಬಾ'' ಎಂದು ಚಿರಪರಿಚಿತರು. ಪೂಜ್ಯರು ತಮ್ಮ ಸಂನ್ಯಾಸ ಜೀವನದ ಹೆಚ್ಚು ಕಾಲವನ್ನು ರಾಮಕೃಷ್ಣ ಸೇವಾಶ್ರಮದಲ್ಲಿ ರೋಗಿಗಳಿಗೆ ಸೇವೆಯನ್ನು ಸಲ್ಲಿಸುವುದರಲ್ಲಿಯೇ ಕಳೆದಿದ್ದಾರೆ. ಇವರು ಆಸ್ಪತ್ರೆಯ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ರೋಗಿಗಳಿಗೆ ಶಸ್ತ್ರಕ್ರಿಯೆಯ ಹಾಗೂ ಇನ್ನಿತರ ಗಾಯಗಳಿಗೆ ಬ್ಯಾಂಡೇಜ್ ಕಟ್ಟುತ್ತಿದ್ದರು. ಗಾಯಗಳನ್ನು ನೋಡುತ್ತಲೇ ಅವು ಎಷ್ಟು ದಿನಗಳಲ್ಲಿ ವಾಸಿಯಾಗುತ್ತದೆ ಎಂಬುದು ಅವರಿಗೆ ಗೊತ್ತಾಗುತ್ತಿತ್ತು. ಅವರು ಅದೆಷ್ಟು ಪೂಜ್ಯತೆಯಿಂದ ಸಮರ್ಪಣಾ ಭಾವದಿಂದ ರೋಗಿಗಳಿಗೆ ಆರೈಕೆ ಮಾಡುತ್ತಿದ್ದರೆಂದರೆ ಸ್ವಾಮೀಜಿಯವರು ಶುಶ್ರೂಷೆ ಮಾಡಿದ ಗಾಯಗಳು ಬೇರೆಯವರು ಶುಶ್ರೂಷೆ ಮಾಡಿದ ಗಾಯಗಳಿಗಿಂತ ಬೇಗನೆ ವಾಸಿಯಾಗುತ್ತಿದ್ದವು. ಅನೇಕ ಸಲ ಮಧ್ಯರಾತ್ರಿಯಲ್ಲೂ ರೋಗಿಗಳು ಆಸ್ಪತ್ರೆಗೆ ದಾಖಲೆಯಾದಾಗ ಸ್ವಾಮೀಜಿಯವರು ಸ್ವಲ್ಪವೂ ಅಸಮಾಧಾನಪಟ್ಟುಕೊಳ್ಳದೆ ತಮ್ಮ ಸ್ವಭಾವ ಸಹಜವಾದ ಶಾಂತಭಾವದಿಂದ ರೋಗಿಗಳಲ್ಲಿ ಸಾಕ್ಷಾತ್ ನಾರಾಯಣನನ್ನು ಕಂಡು ಸೇವೆ ಸಲ್ಲಿಸುತ್ತಿದ್ದರು.

ಸ್ವಾಮಿ ವಿಶ್ವರೂಪಾನಂದರು ಸೇವಾಶ್ರಮದ 'ಡ್ರೆಸ್ಸಿಂಗ್ ರೂಮ್'ನಲ್ಲಿ ಗಾಯಗಳನ್ನು ತೊಳೆದು ಔಷಧೋಪಚಾರ ಮಾಡುತ್ತಿದ್ದರು. ಆಗಿನ ಕಾಲದಲ್ಲಿ ಈಗಿನಂತೆ antibiotics ಇರಲಿಲ್ಲ. ಆದ್ದರಿಂದ ಗಾಯಗಳು ಮಾಯಲು ದೀರ್ಘಕಾಲ ತೆಗೆದುಕೊಳ್ಳುತ್ತಿದ್ದವು. ಕೆಲವೊಮ್ಮೆ ರೋಗಿಗಳ ವ್ರಣಗಳಿಂದ ತೀವ್ರವಾದ ಕೀವು-ರಕ್ತಸ್ರಾವವಾಗಿ ದುರ್ವಾಸನೆ ಬೀರುತ್ತಿದ್ದವು. ಈ ಕೆಟ್ಟ ವಾಸನೆಯಿಂದ ಅನೇಕ ಸಲ ಅವರ ಹಸಿವು-ಬಾಯಾರಿಕೆಯೂ ಕಟ್ಟಿಹೋಗುತ್ತಿತ್ತು. ಆದರೂ ರೋಗಿಗಳಿಗೆ ಸೇವೆ ಮಾಡುವುದೇ ತಮ್ಮ ಆಧ್ಯಾತ್ಮಿಕ ಸಾಧನೆ, ಅದೇ ತಮಗೆ ದೊರಕಿರುವ ಗೌರವಾದರವೆಂದು ಭಾವಿಸಿ ಸೇವೆ ಸಲ್ಲಿಸುತ್ತಿದ್ದರು. ಒಮ್ಮೆ ಶಾರದಾನಂದರು ಸೇವಾಶ್ರಮಕ್ಕೆ ಭೇಟಿಕೊಟ್ಟಾಗ ಸ್ವಾಮಿ ವಿಶ್ವರೂಪಾನಂದರು ಈ ಸಮಸ್ಯೆಯನ್ನು ಅವರ ಗಮನಕ್ಕೆ ತಂದರು. ಸ್ವಾಮಿ ಶಾರದಾನಂದರು ಹೃತ್ಪೂರ್ವಕವಾಗಿ ಶ್ರೀರಾಮಕೃಷ್ಣರನ್ನು ಪ್ರಾರ್ಥಿಸುವಂತೆ ಸಲಹೆ ಸೂಚಿಸಿದರು. ಮರುದಿನ ಅವರು ರೋಗಿಗಳ ಗಾಯಗಳನ್ನು ತೊಳೆದು ಔಷಧವನ್ನು ಲೇಪಿಸಿ ಬ್ಯಾಂಡೇಜ್ ಕಟ್ಟುವಾಗ ಅವರಿಗೆ ವ್ರಣಗಳ ದುರ್ವಾಸನೆ ಬರಲೇ ಇಲ್ಲವೆಂದು ಹೇಳುತ್ತಾರೆ.

ಹೀಗೆ ೧೯೦೦ ಜೂನ್ ೧೩ರಂದು ಪ್ರಾರಂಭವಾದ ಈ ಸೇವಾಶ್ರಮವು ಅಸಂಖ್ಯ ಯತಿವರೇಣ್ಯರ ತ್ಯಾಗ-ಸೇವೆಯ ಮೂರ್ತರೂಪವಾಗಿ, ಈಗ ೨೩೦ ಹಾಸಿಗೆಗಳುಳ್ಳ ಆಧುನಿಕ ಯಂತ್ರೋಪಕರಣದಿಂದ ಕೂಡಿದ ಸುಪ್ರಸಿದ್ಧವಾದ ಆಸ್ಪತ್ರೆ; ೧೨೦ ವರ್ಷಗಳ ಇತಿಹಾಸವಿರುವ ಈ ಸೇವಾಶ್ರಮವು ಇಂದಿಗೂ ಸುವ್ಯವಸ್ಥಿತವಾಗಿ ನಡೆಯಲು ಕಾರಣವಾದ ದಿವ್ಯತ್ರಯರ ತಪಸ್ಸನ್ನೂ, ಚಾರುಚಂದ್ರನ (ಸ್ವಾಮಿ ಶುಭಾನಂದರು) ಬುದ್ಧಿ ಮತ್ತೆ, ಕೇದಾರನಾಥನ (ಸ್ವಾಮಿ ಅಚಲಾನಂದರು) ಸೇವಾ ಮನೋಭಾವನೆ, ಯಾಮಿನೀರಂಜನ್‌ನ ಉತ್ಸಾಹ ಹಾಗೂ ಇತರ ಅನೇಕ ಸ್ನೇಹಿತರ ಸಹಾಯ ಸಹಕಾರಗಳನ್ನೂ ನಾವು ಸ್ಮರಿಸಿಕೊಳ್ಳಲೇಬೇಕಾಗುತ್ತದೆ. ವಾರಣಾಸಿಯ ರಾಮಕೃಷ್ಣ ಸೇವಾಶ್ರಮವು ಒಂದು ವಿಶಿಷ್ಟವಾದ 'ಆಧ್ಯಾತ್ಮಿಕ ಮತ್ತು ಸೇವಾ' ಸಂಸ್ಥೆಯಾಗಿ ಅಸಂಖ್ಯಾತ ಜನರ ಶ್ರದ್ಧಾಕೇಂದ್ರವಾಗಿದೆ. ಈ ಸಂಸ್ಥೆಗೆ ನಮ್ಮ ಅನಂತ ನಮಸ್ಕಾರಗಳು.

ಸ್ವಾಮಿ ಬ್ರಹ್ಮಾನಂದರು ತಾವು ಹಿಂದೆ ದಕ್ಷಿಣ ಭಾರತಕ್ಕೆ ಹೋಗಿದ್ದಾಗ ಕೇಳಿ ಆನಂದಪಟ್ಟಿದ್ದ ರಾಮನಾಮ ಸಂಕೀರ್ತನೆಯನ್ನು ಈ ಸಂದರ್ಭದಲ್ಲಿ ವಾರಾಣಸಿಯ ಆಶ್ರಮದಲ್ಲಿ ಜಾರಿಗೆ ತಂದರು. ಒಂದು ಸಂಜೆ ಸೇವಾಶ್ರಮದ ಪ್ರಾರ್ಥನಾ ಮಂದಿರದಲ್ಲಿ ರಾಮನಾಮ ಸಂಕೀರ್ತನೆಯನ್ನು ಹಾಡುತ್ತಿದ್ದಾಗ ಬ್ರಹ್ಮಾನಂದರಿಗೆ ಮಾರುತಿಯ ದರ್ಶನವಾಯಿತು ! ರಾಮನಾಮ ಸಂಕೀರ್ತನೆಯ ಪ್ರಾರಂಭದ ಶ್ಲೋಕಗಳ ಪಠನ ಆಗತಾನೆ ಪ್ರಾರಂಭವಾಗಿತ್ತು; ಆಗ ಒಬ್ಬ ವೃದ್ಧ ನಿಧಾನವಾಗಿ ಪ್ರಾರ್ಥನಾ ಮಂದಿರವನ್ನು ಪ್ರವೇಶಿಸಿದ. ಇದು ಬ್ರಹ್ಮಾನಂದರಿಗೆ ಮಾತ್ರ ಕಾಣಿಸಿತು. ಆತ ಮೆಲ್ಲಗೆ ನಡೆದುಬಂದು ಶ್ರೀರಾಮನ ಚಿತ್ರಪಟದ ಪಕ್ಕದಲ್ಲೇ ನಿಂತುಕೊಂಡ. ಸ್ವಾಮಿ ಬ್ರಹ್ಮಾನಂದರು ಆ ವೃದ್ಧನನ್ನು ಹೀಗೆ ಎರಡು ಮೂರು ಬಾರಿ ನೋಡಿದರು. ಆತನನ್ನು ಈ ಹಿಂದೆ ಎಲ್ಲೂ ನೋಡಿದ ನೆನಪಾಗಲಿಲ್ಲ. ಆದರೆ ಕೆಲವು ಕ್ಷಣಗಳ ಬಳಿಕ ಮತ್ತೆ ನೋಡಿದಾಗ ಆ ವೃದ್ಧ ಅಲ್ಲಿರಲಿಲ್ಲ! ಆಗ ಅವರಿಗರಿವಾಯ್ತು, ರಾಮನಾಮ ಸಂಕೀರ್ತನೆಯ ಸಂದರ್ಭದಲ್ಲಿ ಬಂದು ಅಲ್ಲಿ ಕುಳಿತಿದ್ದ ಆ ವೃದ್ಧ ಸಾಕ್ಷಾತ್ ಮಾರುತಿಯಲ್ಲದೆ ಬೇರಾರೂ ಅಲ್ಲ ಎಂದು. ಅವರಿಗೆ ತುಲಸೀದಾಸರ ಈ ಪ್ರಸಿದ್ಧ ಶ್ಲೋಕ ನೆನಪಾಯಿತು : **'ಯತ್ರ ಯತ್ರ ರಘುನಾಥಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಂ । ಬಾಷ್ಪ ವಾರಿ ಪರಿಪೂರ್ಣಲೋಚನಂ ಮಾರುತಿಂ ನಮತ ರಾಕ್ಷಸಾಂತಕಮ್ ॥'**

*— 'ಬ್ರಹ್ಮಾನುಭವಿ', ಸ್ವಾಮಿ ಪುರುಷೋತ್ತಮಾನಂದ, ಪು. ೧೩೩*